

# ನವರಂಗದೊಳ್ ನಟನವಾಡಿದಳ್ ತರುಣಿ...

ದೇವಾಲಯಗಳು ಸಂಗೀತ, ನೃತ್ಯ, ಶಿಲ್ಪಕಲೆ, ಚಿತ್ರಕಲೆಗಳಂತಹ ಮಹಾನ್ ಕಲೆಗಳನ್ನು ಪೋಷಿಸಿ, ಬೆಳೆಸುವ ಕೇಂದ್ರವಾಗಿತ್ತು. ಇದಕ್ಕೆ ಸ್ಪಷ್ಟ ಉದಾಹರಣೆ ಕೋಲಾರದ ಪುರಾಣ ಪ್ರಸಿದ್ಧ ಆವಣಿ ಕ್ಷೇತ್ರದಲ್ಲಿರುವ ರಾಮಲಿಂಗೇಶ್ವರ ದೇವಸ್ಥಾನ ಹಾಗು ದೇವಸ್ಥಾನದ ಸಂಕೀರ್ಣದಲ್ಲಿರುವ ಲಕ್ಷ್ಮಣಲಿಂಗೇಶ್ವರ, ಶತ್ರುಘ್ನಲಿಂಗೇಶ್ವರ ಹಾಗು ಭರತಲಿಂಗೇಶ್ವರ ಎಂಬ ನಾಲ್ಕು ದೇವಸ್ಥಾನಗಳು. ಈ ದೇವಾಲಯವನ್ನು 10ನೇ ಶತಮಾನದ ನೊಳಂಬ ರಾಜವಂಶದವರು ನಿರ್ಮಿಸಿದ್ದು, ನಂತರ ಚೋಳರು ಇದನ್ನು ಭಾಗಶಃ ನವೀಕರಿಸಿದರು. ನಂತರ ಬಂದ ವಿಜಯನಗರ ರಾಜರು ಮುಖ ಮಂಟಪ ಮತ್ತು ರಾಜಗೋಪುರವನ್ನು ನಿರ್ಮಿಸಿದರು. ಸಂಗೀತ ಹಾಗು ನೃತ್ಯ ದೇವಸ್ಥಾನದ ಪೂಜಾ ಸಂಪ್ರದಾಯಗಳಲ್ಲಿ ಒಂದಾಗಿತ್ತು ಎಂಬುದನ್ನು ಈ ದೇವಾಲಯಗಳಲ್ಲಿ ವಿಶೇಷವಾಗಿ ಕಂಡುಬರುವ ಅಂತವಾದ ನವರಂಗ ಹಾಗು ನವರಂಗದಲ್ಲಿನ ಕಂಬಗಳಲ್ಲಿರುವ ನೃತ್ಯ ಶಿಲ್ಪಗಳು ಸಾರುತ್ತವೆ.

**ರೋಹಿಣಿ ಮಂಜುನಾಥ್**
ಹವ್ಯಾಸಿ ಬರಹಗಾರರು

ನಮ್ಮ ನಾಡು ಪುರಾತನ ದೇವಸ್ಥಾನಗಳಿಗೆ ಹೆಸರುವಾಸಿಯಾದ ನಾಡು. ಇಂತಹ ನಾಡಲ್ಲಿ ಚೋಳ, ಹೊಯ್ಸಳ, ಚಾಲುಕ್ಯ, ವಿಜಯನಗರ ರಾಜವಂಶಸ್ಥರು ತಮ್ಮ ಕಲಾಶೈಲಿಯ ಛಾಪನ್ನು ದೇವಾಲಯಗಳಲ್ಲಿ ಮೂಡಿಸಿದ್ದಾರೆ. ಇದೇ ರಾಜವಂಶಸ್ಥರ ಆಶ್ರಯದಲ್ಲಿ ನೃತ್ಯ, ಸಂಗೀತ ಮುಂತಾದ ಕಲೆ ಅತಿ ಉನ್ನತ ಸ್ಥಾನವನ್ನು ಪಡೆದುಕೊಂಡಿತ್ತು ಎಂಬುದು ಕೂಡ ಈ ದೇವಾಲಯಗಳಿಂದ ತಿಳಿದುಬರುತ್ತದೆ. ವೇದಗಳ ಕಾಲದಿಂದಲೂ ಸಂಗೀತ ಹಾಗು ನೃತ್ಯಕ್ಕೆ ಅತಿ ಹೆಚ್ಚಿನ ಪ್ರಾಶಸ್ತ್ಯ ಹಾಗು ಪ್ರೋತ್ಸಾಹ ದೊರೆಯುತಿತ್ತು. ಸ್ವಾಮಿ ಪ್ರಜ್ಞಾನಂದರು ತಮ್ಮ 'ಎ ಹಿಸ್ಟರಿ ಆಫ್ ಇಂಡಿಯನ್ ಮ್ಯೂಸಿಕ್' ಎಂಬ ಪುಸ್ತಕದಲ್ಲಿ – ವೇದದ ಕಾಲದಲ್ಲಿ ಸ್ತ್ರೀಯರು ಪ್ರತಿದಿನ ತಮ್ಮ ಹೆಚ್ಚಿನ ಸಮಯವನ್ನು ನೃತ್ಯ, ಹಾಡುಗಾರಿಕೆ ಮತ್ತು ಸಂಗೀತ ವಾದ್ಯಗಳನ್ನು ನುಡಿಸಲು ಮೀಸಲಿಡುತ್ತಿದ್ದರು. ಯುವತಿಯರಲ್ಲಿ ನೃತ್ಯವು ಎಷ್ಟು ಸಾಮಾನ್ಯವಾಗಿತ್ತು ಎಂದರೆ ಸೇವಕಿಯರು ಸಹ ಕಲೆಯಲ್ಲಿ ಹೆಚ್ಚಿನ ಪ್ರಾವೀಣ್ಯತೆಯನ್ನು ಪಡೆದಿದ್ದರು" ಎಂದು ವಿವರಿಸುತ್ತಾರೆ. ಕೃಷ್ಣ–ಯಜುರ್ ವೇದದಲ್ಲಿ, ಮಾರ್ಜಾಲೀಯ ಅಗ್ನಿಯು ಎಲ್ಲಿ ಉರಿಯುತ್ತಿತ್ತೋ, ಅಲ್ಲಿ ಸೇವೆ ಸಲ್ಲಿಸುತ್ತಿದ್ದ ಯುವತಿಯರು ನೀರಿನ ಹೂಜಿಗಳನ್ನು ಹೊತ್ತುಕೊಂಡು ಲಯಬದ್ಧವಾಗಿ ಅಗ್ನಿಯ ಸುತ್ತಲೂ ನೃತ್ಯ ಮಾಡುತ್ತಿದ್ದರು ಎಂದು ಉಲ್ಲೇಖಿಸಲಾಗಿದೆ. ಕೌಶಿಕ–ಬ್ರಾಹ್ಮಣದಲ್ಲಿ ನೃತ್ಯ

ಹಾಡುಗಾರಿಕೆ ಮತ್ತು ಸಂಗೀತ ವಾದ್ಯಗಳನ್ನು ನುಡಿಸುವ ಕಲೆಗಳು ಕೆಲವು ವೈದಿಕ ವಿಧಿಗಳ ಪ್ರಮುಖ ಭಾಗವಾಗಿತ್ತು ಎಂದು ಹೇಳಲಾಗಿದೆ. ಈ ಆಚರಣೆಯೇ ದೇವಸ್ಥಾನಗಳಲ್ಲಿ ಮುಂದೆ ಸಂಪ್ರದಾಯವಾಗಿ ಬಂದವು. ದೈವದತ್ತವಾದ ಈ ಕಲೆಗಳು ಇಂದಿಗೂ ನಮ್ಮ ಸಮಾಜದ ಅವಿಭಾಜ್ಯ ಅಂಗವಾಗಿ ಮುಂದುವರೆದಿದೆ.

ದೇವಾಲಯಗಳು ಸಂಗೀತ, ನೃತ್ಯ, ಶಿಲ್ಪಕಲೆ, ಚಿತ್ರಕಲೆಗಳಂತಹ ಮಹಾನ್ ಕಲೆಗಳನ್ನು ಪೋಷಿಸಿ, ಬೆಳೆಸುವ ಕೇಂದ್ರವಾಗಿತ್ತು. ಇದಕ್ಕೆ ಸ್ಪಷ್ಟ ಉದಾಹರಣೆ ಕೋಲಾರದ ಪ್ರಸಿದ್ಧ ಅವನಿ ಕ್ಷೇತ್ರದಲ್ಲಿರುವ ರಾಮಲಿಂಗೇಶ್ವರ ದೇವಸ್ಥಾನ ಹಾಗು ದೇವಸ್ಥಾನದ ಸಂಕೀರ್ಣದಲ್ಲಿರುವ ಲಕ್ಷ್ಮಣಲಿಂಗೇಶ್ವರ, ಶತ್ರುಘ್ನಲಿಂಗೇಶ್ವರ ಹಾಗು ಭರತಲಿಂಗೇಶ್ವರ ಎಂಬ ನಾಲ್ಕು ದೇವಸ್ಥಾನಗಳು. ಈ ದೇವಾಲಯವನ್ನು 10ನೇ ಶತಮಾನದ ನೊಳಂಬ ರಾಜವಂಶದವರು ನಿರ್ಮಿಸಿದ್ದು, ನಂತರ ಚೋಳರು ಇದನ್ನು ಭಾಗಶಃ ನವೀಕರಿಸಿದರು. ನಂತರ ಬಂದ ವಿಜಯನಗರ ರಾಜರು ಮುಖ ಮಂಟಪ ಮತ್ತು ರಾಜಗೋಪುರವನ್ನು ನಿರ್ಮಿಸಿದರು. ಸಂಗೀತ ಹಾಗು ನೃತ್ಯ ದೇವಸ್ಥಾನದ ಪೂಜಾ ಸಂಪ್ರದಾಯಗಳಲ್ಲಿ ಒಂದಾಗಿತ್ತು ಎಂಬುದನ್ನು ಈ ದೇವಾಲಯಗಳಲ್ಲಿ ವಿಶೇಷವಾಗಿ ಕಂಡುಬರುವ ಅಂತಹದ ನವರಂಗ ಹಾಗು ನವರಂಗದಲ್ಲಿನ ಕಂಬಗಳಲ್ಲಿರುವ ನೃತ್ಯ ಶಿಲ್ಪಗಳು ಸಾರುತ್ತವೆ.



ಕಲ್ಯಾಣ ಚಾಲುಕ್ಯ ಮತ್ತು ಹೊಯ್ಸಳ ಶೈಲಿಯ ಇತರ ಕೆಲವು ದೇವಾಲಯಗಳಲ್ಲಿ, ದೇವಾಲಯಕ್ಕೆ ಗೂಢಮಂಟಪವನ್ನು ಒದಗಿಸಲಾಗಿಲ್ಲ. ಬದಲಿಗೆ ಸುಕನಾಸಿಯ ಮುಂದೆ, ದೊಡ್ಡ ತೆರೆದ ಸಭಾಂಗಣವನ್ನು ನಿರ್ಮಿಸಲಾಯಿತು. ಈ ಸಭಾಂಗಣದ ಮಧ್ಯಭಾಗದಲ್ಲಿ ಸ್ವಲ್ಪ ಎತ್ತರದ ವೇದಿಕೆಯನ್ನು ನಿರ್ಮಿಸಿ, ಈ ವೇದಿಕೆಯನ್ನು ಎಲ್ಲಾ ರೀತಿಯ ಪ್ರದರ್ಶನ ಕಲೆಗಳಿಗೆ ಬಳಸಲಾಯಿತು. ಅಂತಹ ಕಂಬಗಳಿರುವ ಸಭಾಂಗಣಗಳನ್ನು ನವರಂಗ ಎಂದು ಕರೆಯುವ ಬದಲು ಅವುಗಳನ್ನು ರಂಗಮಂಟಪ ಎಂದು ಕರೆಯಲಾಗುತ್ತದೆ. ವಿಜಯನಗರ ಶೈಲಿಯ ದೇವಸ್ಥಾನಗಳಲ್ಲೂ ಇಂತಹುದೇ ರಂಗಮಂಟಪವನ್ನು ಹೆಚ್ಚಾಗಿ ಕಾಣಬಹುದು. ಈ ರಂಗಮಂಟಪವನ್ನು ನಾಟ್ಯ ಮಂಟಪ, ನಟನ ಶಾಲೈ, ಸಬಿರ್ ಶಾಲೈ, ನಾನಾವಿಧ ನಟನ ಶಾಲೈ, ನಾಟ್ಯ ಮಂಟಪ, ನೃತ್ಯ ಮಂಟಪ ಮತ್ತು ಕೂತಂಬಲಂ ಎಂದಾಗಿ ವಿವಿಧ ಪ್ರದೇಶಗಳಲ್ಲಿ ವಿಭಿನ್ನ ಹೆಸರುಗಳಿಂದ ಕರೆಯಲಾಗುತ್ತಿತ್ತು.

ಕಂಬವಲ್ಲಿರುವ ಶಿಲ್ಪದಲ್ಲಿ ಸುಂದರ ನರ್ತಕಿಯರ ಜೊತೆ ವಿವಿಧ ವಾದ್ಯ ವೃಂದದಲ್ಲಿ ನಟ್ಟುವನಾರ, ಮೃದಂಗದವರು, ಉಡುಕ್ಕ ನುಡಿಸುವವರನ್ನು ಕಾಣಬಹುದು. ಇಲ್ಲಿ ಕೇವಲ ತಾಳಕ್ಕೆ ಬೇಕಾಗಿರುವ ಘನ ಹಾಗು ಅವನದ್ಧ ವಾದ್ಯಗಳನ್ನು ಮಾತ್ರ ಈ ರಂಗಭೋಗಕ್ಕೆ ಬಳಸಿದ್ದಾರೆ. ಅಲ್ಲದೆ ಕಲಾವಿದರು ನಿಂತು ವಾದ್ಯವನ್ನು ನುಡಿಸುತ್ತಿರುವುದನ್ನು ವಿಶ್ಲೇಷಿಸಿದರೆ ಆ ಕಾಲದಲ್ಲಿ ಇಂದಿನ ರೀತಿಯ ಪಕ್ಕವಾದ್ಯದವರಿಗೆ ಬಳಸುವ ವಿಶೇಷವಾದ ವೇದಿಕೆ ಇರಲಿಲ್ಲವೆಂದು ತೋರುತ್ತದೆ.

ಪ್ರಸಿದ್ಧ ಗುರುಗಳಾದ ಶ್ರೀಮತಿ ಉಷಾ ದಾತಾರ್ ಅವರು ಈ ಶ್ರೀಮಂತ ಸಂಪ್ರದಾಯದ ಬಗ್ಗೆ ಹೀಗೆ ಹೇಳುತ್ತಾರೆ – "ನರ್ತಕಿಯು ವಿವಿಧ ಸಾಂಪ್ರದಾಯಿಕ ವಾದ್ಯಗಳ ಸಂಗೀತಕ್ಕೆ ಹೆಜ್ಜೆ ಹಾಕುವ ಮೂಲಕ ನೃತ್ಯದ ಆರಂಭವನ್ನು ಅಥವಾ ರಂಗ ಭೋಗವನ್ನು ಪ್ರಾರಂಭಿಸುತ್ತಾಳೆ. ರಂಗ ಮಂಟಪ ಅಥವಾ ವೇದಿಕೆಯನ್ನು ಪ್ರವೇಶಿಸುವಾಗ, ಒಂಬತ್ತು ದಿಕ್ಕುಗಳ ಅಧಿಪತಿಗಳ ಆಶೀರ್ವಾದವನ್ನು ಪಡೆಯಲು ಒಂಬತ್ತು ದಿಕ್ಕುಗಳಿಗೆ ನೃತ್ಯದ ಮೂಲಕ ನಮಸ್ಕಾರಗಳನ್ನು ಸಲ್ಲಿಸುತ್ತಾಳೆ. ಆಯಾ ನಿರ್ದಿಷ್ಟ ದಿಕ್ಕನ್ನು ಆಳುವ ಅಧಿಪತಿಯನ್ನು ಸಂತೋಷಗೊಳಿಸಲು ಪ್ರತಿಯೊಂದು ದಿಕ್ಕಿಗೂ ತನ್ನದೇ ಆದ ರಾಗ ಮತ್ತು ತಾಳದಲ್ಲಿ ನಮಸ್ಕಾರವನ್ನು ಮಾಡಲಾಗುತ್ತದೆ. ಹೀಗೆ ಇದೊಂದು ಸುದೀರ್ಘವಾದ ಪೂಜಾ ಕೈಂಕರ್ಯವಾಗಿತ್ತು."

ಸಾಂಪ್ರದಾಯಿಕವಾಗಿ ಇಂದಿಗೂ ನಾವು ನೃತ್ಯದಲ್ಲಿ ನವಸಂಧಿ ಕೌತುವಂಗಳೆಂಬ ದೇವಸ್ಥಾನದ ಪೂಜಾ ಹಾಗು ಉತ್ಸವದ ಸಂದರ್ಭದಲ್ಲಿ ಮಾಡುವ ನರ್ತನವನ್ನು ಕಾಣಬಹುದು.

ಈ ದೇವಾಲಯದಲ್ಲಿ, ಗೋಪುರದಿಂದ ಪ್ರಾರಂಭವಾಗಿ, ಕಡೆಗೆ ಜಾಲವಾತಾಯನದವರೆಗೂ ನರ್ತನವನ್ನು ಕಾಣಬಹುದು. ಯುಗಳ ನೃತ್ಯ ಕೂಡ ಈ ಸಮಯದಲ್ಲಿ ಸಾಮಾನ್ಯವಾಗಿದ್ದುದು ಇಲ್ಲಿ ಕಾಣಬಹುದು. ಲಕ್ಷ್ಮಣಲಿಂಗೇಶ್ವರದ ನವರಂಗದ ಒಂದು ಕಂಬದಲ್ಲಿ ಸಾಕ್ಷಾತ್ ಆ ಮಹಾ ನಟನನ್ನೇ ಕಾಣಬಹುದು.

ಇನ್ನು ಈ ನವರಂಗದ ಧ್ವನಿ ಹಾಗು ಬೆಳಕಿನತ್ತ ಗಮನಹರಿಸೋಣ. ದಕ್ಷಿಣ ಭಾರತದ ದೇವಾಲಯಗಳಲ್ಲಿ ಧ್ವನಿಶಾಸ್ತ್ರದ (acoustics) ಅರಿವನ್ನು ಇಟ್ಟುಕೊಂಡು ದೇವಾಲಯ ನಿರ್ಮಾಣ ಮಾಡಲಾಗಿತ್ತು. ಕಲ್ಲು ಹೆಚ್ಚು ಪ್ರತಿಧ್ವನಿಯನ್ನು ಮೂಡಿಸುತ್ತದೆ. ಅಂತಹ ಕಲ್ಲಿನ ಮೇಲೆ ಕೆತ್ತನೆಗಳನ್ನು ಮಾಡಿದಾಗ ಈ ಪ್ರತಿಧ್ವನಿಯು ಕಡಿಮೆಯಾಗುತ್ತದೆ. ನಂತರ ಕಂಬದಲ್ಲಿನ ಈ ಶಿಲೆಯುದ್ದಕ್ಕೂ ಧ್ವನಿವರ್ಧಕ ಸಾಧನದಂತಾಗಿ ನಮ್ಮ ಅನುಕೂಲಕ್ಕೆ ತಕ್ಕಂತೆ ಪರಿವರ್ತಿಸಿಕೊಳ್ಳಬಹುದಾಗಿದೆ. ಇಂತಹ ಒಂದು ವಿಜ್ಞಾನದ ಅರಿವು ನಮ್ಮ ಶಿಲ್ಪಿಗಳಿಗೂ ಇತ್ತು ಎಂಬ ಸಂಗತಿ ಆಶ್ಚರ್ಯವುಂಟುಮಾಡುತ್ತದೆ.

ದೇವಾಲಯಗಳಲ್ಲಿ ಪ್ರಕಾಶಕ್ಕೆ ಮೂಲವಾದ ಸೂರ್ಯನಿಗೆ ಪ್ರಾಮುಖ್ಯತೆಯನ್ನು ನೀಡಿದ್ದರೂ ಸಹ, ನೈಸರ್ಗಿಕ ಬೆಳಕನ್ನು

ಇಲ್ಲಿರುವ ನಾಲ್ಕು ಕಂಬಗಳಲ್ಲಿರುವ, ನೃತ್ಯ ಶಿಲ್ಪಗಳು ಹಾಗು ವಾದ್ಯ ಸಂಗೀತದವರ ಕಡೆ ಒಮ್ಮೆ ಗಮನಹರಿಸಿದಾಗ ಈ ದೇವಸ್ಥಾನದಲ್ಲೂ ರಂಗಭೋಗದ ಸಂಪ್ರದಾಯವಿದ್ದಿರಬಹುದು ಎಂದು ಅನಿಸುತ್ತದೆ. ಈ ರಂಗಭೋಗ ಸಂಪ್ರದಾಯದ ಬಗ್ಗೆ ಕೊಂಚ ಪರಿಚಯ ಮಾಡಿಕೊಳ್ಳೋಣ.

3ನೆ ಶತಮಾನದಿಂದ 6 ನೇ ಶತಮಾನದವರೆಗೂ ಭಕ್ತರು ದೇವಸ್ಥಾನಕ್ಕೆ ಕಾಣಿಕೆ ರೂಪದಲ್ಲಿ ಸಲ್ಲಿಸುವ ಸೇವೆಯನ್ನು ದೇವಭೋಗ ಎಂದು ಕರೆಯಲಾಗುತ್ತಿತ್ತು ಎಂಬ ಉಲ್ಲೇಖವಿದೆ. ಸುಮಾರು 9ನೆ ಶತಮಾನದ ಕೊನೆಯ ಹೊತ್ತಿಗೆ ದೇವಭೋಗವನ್ನು ಅಂಗಭೋಗ ಹಾಗು ರಂಗಭೋಗವನ್ನಾಗಿ ವಿಂಗಡಿಸಲಾಯಿತು. ಅಂಗಭೋಗವು ಗರ್ಭಗುಡಿಯ ಒಳಗೆ ಮೂಲ ವಿಗ್ರಹಕ್ಕೆ ಮಾಡುವ ಸೇವೆಗಳು ಅಂದರೆ ಅಭಿಷೇಕ, ಪೂಜಾ, ನೈವೇದ್ಯ, ಹಲವು ರೀತಿಯ ಆರತಿಗಳನ್ನು ಹೊಂದಿರುತ್ತಿತ್ತು. ರಂಗಭೋಗವು ಗರ್ಭಗುಡಿಯ ಹೊರಗೆ ನವರಂಗದಲ್ಲಿ ಮಾಡುವ ಸೇವೆಗಳು – ಅಂದರೆ ಸಂಗೀತ, ನೃತ್ಯ, ಪುರಾಣವಾಚನ ಮುಂತಾದವುಗಳನ್ನು ಹೊಂದಿರುತ್ತದೆ. ಈ ಸೇವೆ ಮಾಡುವವರಿಗೆ ರಂಗಭೋಗದವರು ಎಂದೇ ಕರೆಯಲಾಗುತ್ತಿತ್ತು. ಈ ಕಲಾವಿದರು ನವರಂಗದ ಮೇಲೆ ದೇವರಿಗೆ ಅಭಿಮುಖವಾಗಿ ನಿಂತು ಬಹಳ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿದ್ದರು.

ಇಲ್ಲಿ ಸೇವೆ ಸಲ್ಲಿಸಬಹುದಾದ ನರ್ತಕಿಯ ಹಸ್ತಾಲಂಕಾರ, ಆಭರಣ, ಕೇಶವಿನ್ಯಾಸವನ್ನು ಶಿಲ್ಪಿಯು ಅತಿ ಸೂಕ್ಷ್ಮವಾಗಿ ಬಹಳ ವಿಭಿನ್ನವಾಗಿ ಕೆತ್ತಿದ್ದಾನೆ. ಈ ನರ್ತಕಿಯ ಮುಖದಲ್ಲಿ ಪ್ರಸನ್ನತೆಯ ಭಾವ ಕಾಣಬಹುದು. ಈ ಕೆತ್ತನೆಯಲ್ಲಿ ಈಕೆ ಸುರಸುಂದರಿಯಂತೆ ಕಂಡರೆ, ಇನ್ನು ವಾಸ್ತವಾಂಶದಲ್ಲಿ ಈಕೆಯದು ರಂಬೆ ಊರ್ವಶಿಯರನ್ನು ನಾಚಿಸುವ ಸೌಂದರ್ಯವಷ್ಟೇ ಸರಿ.



ಬಹಳ ವಿರಳವಾಗಿ ಬಳಸಲಾಗುತ್ತಿತ್ತು. ಮಾನವನ ಕಣ್ಣುಗಳು ಬೆಳಕಿನಲ್ಲಿ ಭೌತಿಕ ಪ್ರಪಂಚದ ಕಡೆಗೆ ವಿಚಲಿತವಾಗದೆ, ಗುಡಿಯ ಕತ್ತಲೆಯಿಂದ ಆಧ್ಯಾತ್ಮಿಕ ಜಗತ್ತಿನಲ್ಲಿ ಕೆಲವು ಕ್ಷಣಗಳು ಆ ಪರಮಾತ್ಮನ ಧ್ಯಾನದಲ್ಲಿ ತಲ್ಲೀನರಾಗಲಿ ಎಂಬ ಆಶಯವಿತ್ತು. ಹಾಗಾಗಿ ಗರ್ಭಗುಡಿಯಲ್ಲಿ ಮಾತ್ರ ದೇವರ ದರ್ಶನಕ್ಕೆಂದು ದೀಪ ಹಚ್ಚುತ್ತಿದ್ದರು. ಆದರೆ ರಂಗಭೋಗದ ಕ್ರಿಯೆಯಕ್ಕೆ ನವರಂಗದಲ್ಲಿ ಬೆಳಕನ್ನು ಹೇಗೆ ಒದಗಿಸುತ್ತಿದ್ದರು?

ಶಿಲ್ಪಿಗಳು, ದಕ್ಷಿಣದಿಂದ ಬರುವ ಬೆಳಕು ಸಾಮಾನ್ಯವಾಗಿ ಉತ್ತಮವಾಗಿರುತ್ತದೆ ಏಕೆಂದರೆ ಸೂರ್ಯನ ಬೆಳಕು ದಿನವಿಡೀ ಮತ್ತು ವರ್ಷವಿಡೀ ಸ್ಥಿರವಾಗಿರುತ್ತದೆ ಎಂದು ಆ ಭಾಗಕ್ಕೆ ಜಾಲವಾತಾಯನವನ್ನು ನಿರ್ಮಿಸುತ್ತಿದ್ದರು. ಕಣ್ಣಿನ ಮಟ್ಟಕ್ಕಿಂತ ಎತ್ತರದಲ್ಲಿರುವ ಕಿಟಕಿಗಳು ಇಡೀ ಕೋಣೆಯನ್ನು ಬೆಳಗಿಸಬಹುದು. ಬೆಳಕು ಜಾಲವಾತಾಯನದ ಮೂಲಕ ಪ್ರವೇಶಿಸಿ ಛಾವಣಿಯ ಮೇಲೆ ಪ್ರತಿಫಲಿಸಿದಾಗ ( reflect), ಕೆಳಗಿನ ಕೋಣೆಯ ಸುತ್ತಲೂ ಬೆಳಕನ್ನು ಹರಡುತ್ತದೆ. ಈ ನವರಂಗವನ್ನು ಇದೇ ಪರಿಕಲ್ಪನೆಯ ಆಧಾರದಮೇಲೆ ನಿರ್ಮಿಸಲಾಗಿದೆ.

ಶಿಲ್ಪಿಗಳು, ದೇವಾಲಯವನ್ನು ಕಟ್ಟಲು ವಾಸ್ತುಶಿಲ್ಪ, ಶಿಲ್ಪವನ್ನು ಕೆತ್ತಲು ಶಿಲ್ಪಶಾಸ್ತ್ರ, ನೃತ್ಯ ಶಿಲ್ಪವನ್ನು ಕೆತ್ತಲು ನಾಟ್ಯಶಾಸ್ತ್ರ, ಭೌಗೋಳಿಕ ಶಾಸ್ತ್ರ, ವಿಜ್ಞಾನ. ಹೀಗೆ ಇನ್ನು ಎಷ್ಟೋ ಶಾಸ್ತ್ರಗಳಲ್ಲಿ ಪರಿಣತಿ ಹೊಂದಿದ್ದರೆಂದು ತಿಳಿದುಬರುತ್ತದೆ.

ದಕ್ಷಿಣ ಭಾರತದ ದೇವಾಲಯಗಳು ಧಾರ್ಮಿಕ, ಕಲೆ ಮತ್ತು ಸಾಂಸ್ಕೃತಿಕ ವೈಭವದ ನಿಜವಾದ ಭಂಡಾರವಾಗಿದೆ. ಇಂತಹ ಪುರಾತನ ದೇವಾಲಯಗಳನ್ನು ಸಂರಕ್ಷಿಸುವ ಪ್ರಾಮುಖ್ಯತೆಯನ್ನು ಶಿವಭಕ್ತಿಯ ಇದು ಉದಾತ್ತ ಕ್ರಮಗಳಲ್ಲಿ ಒಂದಾಗಿ ಸೇರಿಸುವ ಮೂಲಕ ಒತ್ತಿಹೇಳಲಾಗಿದೆ. ಪವಿತ್ರ ಕ್ಷೇತ್ರಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಶ್ರದ್ಧೆಯಿಂದ ಕೆಲಸ ಮಾಡುವ ಮೂಲಕ ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಳ್ಳಲು ನಾವೆಲ್ಲರೂ ಹೋರಾಡೋಣ.

Reference :

shodhganga.inflibnet.ac.in/bitstream/10603/91948/10/10_chapte
www.wisdomlib.org
https://www.sundayobserver.lk/2021/08/22/feature/architectural-excellence-ancient-indian-dance-halls
Guru Usha Dattar – THARANG UTSAV
Jnanayagna series 4 – Dr Karuna Vijayendra
www.rasikas.org/forums/viewtopic.php?t=34694
Shodhganga@INFLIBNET: A Study of Acoustics in Performance Spaces
core.ac.uk/download/pdf/6101658.pdf
Lighting in ancient Temples | Dr. Uday Dokras - Academia.edu
ನಟನ ವಾಡಿದಳ್ ತರುಣಿ (Natanavaadidal Tharuni) | ಕನ್ನಡ ನುಡಿ(Kannada Nudi)

Picture courtesy : Smt. Divya Prasad

ಈ ಪ್ರಕಟಿತ ಲೇಖನದ ಪೂರ್ಣ ಪಾಠ ಇಲ್ಲಿದೆ.

# ನವರಂಗದೊಳ್ ನಟನವಾಡಿದಳ್ ತರುಣಿ.....

- ರೋಹಿಣಿ ಮಂಜುನಾಥ್, ಬೆಂಗಳೂರು

ನಮ್ಮ ನಾಡು ಪುರಾತನ ದೇವಸ್ಥಾನಗಳಿಗೆ ಹೆಸರುವಾಸಿಯಾದ ನಾಡು. ಇಂತಹ ನಾಡಲ್ಲಿ ಚೋಳ, ಹೊಯ್ಸಳ, ಚಾಲುಕ್ಯ, ವಿಜಯನಗರ ರಾಜವಂಶಸ್ಥರು ತಮ್ಮ ಕಲಾಶೈಲಿಯ ಛಾಪನ್ನು ದೇವಾಲಯಗಳಲ್ಲಿ ಮೂಡಿಸಿದ್ದಾರೆ. ಇದೇ ರಾಜವಂಶಸ್ಥರ ಆಶ್ರಯದಲ್ಲಿ ನೃತ್ಯ, ಸಂಗೀತ ಮುಂತಾದ ಕಲೆ ಅತಿ ಉನ್ನತ ಸ್ಥಾನವನ್ನು ಪಡೆದುಕೊಂಡಿತ್ತು ಎಂಬುದು ಕೂಡ ಈ ದೇವಾಲಯಗಳಿಂದ ತಿಳಿದುಬರುತ್ತದೆ. ವೇದಗಳ ಕಾಲದಿಂದಲೂ ಸಂಗೀತ ಹಾಗು ನೃತ್ಯಕ್ಕೆ ಅತಿ ಹೆಚ್ಚಿನ ಪ್ರಾಶಸ್ತ್ಯ ಹಾಗು ಪ್ರೋತ್ಸಾಹ ದೊರೆಯುತಿತ್ತು. ಸ್ವಾಮಿ ಪ್ರಜ್ಞಾನಂದರು ತಮ್ಮ "ಎ ಹಿಸ್ಟರಿ ಆಫ್ ಇಂಡಿಯನ್ ಮ್ಯೂಸಿಕ್" ಎಂಬ ಪುಸ್ತಕದಲ್ಲಿ – ವೇದದ ಕಾಲದಲ್ಲಿ ಸ್ತ್ರೀಯರು ಪ್ರತಿದಿನ ತಮ್ಮ ಹೆಚ್ಚಿನ ಸಮಯವನ್ನು ನೃತ್ಯ, ಹಾಡುಗಾರಿಕೆ ಮತ್ತು ಸಂಗೀತ ವಾದ್ಯಗಳನ್ನು ನುಡಿಸಲು ಮೀಸಲಿಡುತ್ತಿದ್ದರು. ಯುವತಿಯರಲ್ಲಿ ನೃತ್ಯವು ಎಷ್ಟು ಸಾಮಾನ್ಯವಾಗಿತ್ತು ಎಂದರೆ ಸೇವಕಿಯರು ಸಹ ಕಲೆಯಲ್ಲಿ ಹೆಚ್ಚಿನ ಪ್ರಾವೀಣ್ಯತೆಯನ್ನು ಪಡೆದಿದ್ದರು" ಎಂದು ವಿವರಿಸುತ್ತಾರೆ. ಕೃಷ್ಣ–ಯಜುರ್ ವೇದದಲ್ಲಿ, ಮಾರ್ಜಾಲೀಯ ಅಗ್ನಿಯು ಎಲ್ಲಿ ಉರಿಯುತ್ತಿತ್ತೋ, ಅಲ್ಲಿ ಸೇವೆ ಸಲ್ಲಿಸುತ್ತಿದ್ದ ಯುವತಿಯರು ನೀರಿನ ಹೂಜಿಗಳನ್ನು ಹೊತ್ತುಕೊಂಡು ಲಯಬದ್ಧವಾಗಿ ಅಗ್ನಿಯ ಸುತ್ತಲೂ ನೃತ್ಯ ಮಾಡುತ್ತಿದ್ದರು ಎಂದು ಉಲ್ಲೇಖಿಸಲಾಗಿದೆ. ಕೌಶೀತಕಿ –ಬ್ರಾಹ್ಮಣದಲ್ಲಿ ನೃತ್ಯ, ಹಾಡುಗಾರಿಕೆ ಮತ್ತು ಸಂಗೀತ ವಾದ್ಯಗಳನ್ನು ನುಡಿಸುವ ಕಲೆಗಳು ಕೆಲವು ವೈದಿಕ ವಿಧಿಗಳ ಪ್ರಮುಖ ಭಾಗವಾಗಿತ್ತು ಎಂದು ಹೇಳಲಾಗಿದೆ. ಈ ಆಚರಣೆಯೇ ದೇವಸ್ಥಾನಗಳಲ್ಲಿ ಸಂಪ್ರದಾಯವಾಗಿ ಬಂದವು. ಇಂದಿಗೂ ದೈವದತ್ತವಾದ ಈ ಕಲೆಗಳು ನಮ್ಮ ಸಮಾಜದ ಅವಿಭಾಜ್ಯ ಅಂಗವಾಗಿ ಮುಂದುವರೆದಿವೆ.



ಹೀಗೆ ದೇವಾಲಯಗಳು ಸಂಗೀತ, ನೃತ್ಯ, ಶಿಲ್ಪಕಲೆ, ಚಿತ್ರಕಲೆಗಳಂತಹ ಮಹಾನ್ ಕಲೆಗಳನ್ನು ಪೋಷಿಸಿ, ಬೆಳೆಸುವ ಕೇಂದ್ರವಾಗಿತ್ತು. ೩ನೆ ಶತಮಾನದಿಂದ ೬ ನೇ ಶತಮಾನದವರೆಗೂ ಭಕ್ತರು ದೇವಸ್ಥಾನಕ್ಕೆ ಕಾಣಿಕೆ ರೂಪದಲ್ಲಿ ಸಲ್ಲಿಸುವ ಸೇವೆಯನ್ನು ದೇವಭೋಗ ಎಂದು ಕರೆಯಲಾಗಿತ್ತು ಎಂಬ ಉಲ್ಲೇಖವಿದೆ. ಸುಮಾರು ೯ನೆ ಶತಮಾನದ ಕೊನೆಯ ಹೊತ್ತಿಗೆ ದೇವಭೋಗವನ್ನು ಅಂಗಭೋಗ ಹಾಗು ರಂಗಭೋಗವನ್ನಾಗಿ ವಿಂಗಡಿಸಲಾಯಿತು. ಅಂಗಭೋಗವು ಗರ್ಭಗುಡಿಯ ಒಳಗೆ ಮೂಲ ವಿಗ್ರಹಕ್ಕೆ ಮಾಡುವ ಸೇವೆಗಳು ಅಂದರೆ ಅಭಿಷೇಕ, ಪೂಜಾ, ನೈವೇದ್ಯ, ಹಲವು ರೀತಿಯ ಆರತಿಗಳನ್ನು ಹೊಂದಿರುತ್ತಿತ್ತು. ರಂಗಭೋಗವು ಗರ್ಭಗುಡಿಯ ಹೊರಗೆ ನವರಂಗದಲ್ಲಿ ಮಾಡುವ ಸೇವೆಗಳು – ಅಂದರೆ ಸಂಗೀತ, ನೃತ್ಯ, ಪುರಾಣವಾಚನ ಮುಂತಾದವುಗಳನ್ನೂ ಹೊಂದಿರುತ್ತದೆ.. ಈ ಸೇವೆ ಮಾಡುವವರಿಗೆ ರಂಗಭೋಗದವರು ಎಂದೇ ಕರೆಯಲಾಗುತಿತ್ತು. ಈ ಕಲಾವಿದರು ನವರಂಗದ ಮೇಲೆ ದೇವರಿಗೆ ಅಭಿಮುಖವಾಗಿ ನಿಂತು ಬಹಳ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿದ್ದರು.

ಇದಕ್ಕೆ ಸ್ಪಷ್ಟ ಉದಾಹರಣೆ ಕೋಲಾರದ ಪುರಾಣ ಪ್ರಸಿದ್ಧ ಆವಣಿ ಕ್ಷೇತ್ರದಲ್ಲಿರುವ ರಾಮಲಿಂಗೇಶ್ವರ ದೇವಸ್ಥಾನ ಹಾಗು ದೇವಸ್ಥಾನದ ಸಂಕೀರ್ಣದಲ್ಲಿರುವ ಲಕ್ಷ್ಮಣಲಿಂಗೇಶ್ವರ, ಶತೃಘ್ನಲಿಂಗೇಶ್ವರ ಹಾಗು ಭರತಲಿಂಗೇಶ್ವರ ಎಂಬ ನಾಲ್ಕು ದೇವಸ್ಥಾನಗಳು. ಈ ದೇವಾಲಯವನ್ನು 10ನೇ ಶತಮಾನದ ನೊಳಂಬ ರಾಜವಂಶದವರು ನಿರ್ಮಿಸಿದ್ದು, ನಂತರ ಚೋಳರು ಇದನ್ನು ಭಾಗಶಃ ನವೀಕರಿಸಿದರು. ಅನಂತರ ಬಂದ ವಿಜಯನಗರ ರಾಜರು ಮುಖ ಮಂಟಪ ಮತ್ತು ರಾಜಗೋಪುರವನ್ನು ನಿರ್ಮಿಸಿದರು. ಸಂಗೀತ ಹಾಗು ನೃತ್ಯ ದೇವಸ್ಥಾನದ ಪೂಜಾ ಸಂಪ್ರದಾಯಗಳಲ್ಲಿ ಒಂದಾಗಿತ್ತು

ಎಂಬುದನ್ನು ಈ ದೇವಾಲಯಗಳಲ್ಲಿ ವಿಶೇಷವಾಗಿ ಕಂಡುಬರುವ ಅಂಶವಾದ ನವರಂಗ ಹಾಗು ಅಲ್ಲಿನ ಕಂಬಗಳಲ್ಲಿರುವ ನೃತ್ಯ ಶಿಲ್ಪಗಳು ಸಾರುತ್ತವೆ.

ದೇವಾಲಯದ ಗರ್ಭಗೃಹದ ಮುಂಭಾಗದ ಸಭಾಂಗಣವೇ ನವರಂಗ, ಅರ್ಧಮಂಟಪ ಅಥವ ಗೂಢಮಂಟಪವೆನ್ನುತ್ತಾರೆ. ಗೂಢಮಂಡಪ ಅಕ್ಷರಶಃ ಗೂಢವಾಗಿಯೇ ಇರುತ್ತಿತ್ತು. ಅಂದರೆ ಇಲ್ಲಿ ನಡೆಯುವ ಸೇವೆ ದೇವರಿಗೆ ಮಾತ್ರ ಮೀಸಲಾಗಿತ್ತು. ಹೊರಗಿನ ಜಗತ್ತಿಗೆ ಇದನ್ನು ನೋಡುವ ಅವಕಾಶವಿರಲಿಲ್ಲ. ಈ ಮಂಟಪ ಎಲ್ಲಾ ಬದಿಗಳಿಂದಲೂ ಮುಚ್ಚಲ್ಪಟ್ಟ ಮಂಟಪ. ಗೂಢಮಂಟಪಕ್ಕೆ ನವರಂಗವೆಂಬ ಹೆಸರು ಸುಮಾರು ೧೩ –೧೪ ಶತಮಾನದ ಅನಂತರ ರೂಢಿಗೆ ಬಂದಿತು. ಕನ್ನಡದಲ್ಲಿ ನವ ಎಂದರೆ ಒಂಬತ್ತು ಮತ್ತು ರಂಗ ಎಂದರೆ ವೇದಿಕೆ. ಒಂಬತ್ತು ಚೌಕಗಳ (3X3) ಅಳತೆಯನ್ನಿಟ್ಟುಕೊಂಡು ರಚಿಸಿರುವ ಸಭಾಂಗಣವನ್ನು ನವರಂಗ ಎಂದು ಕರೆಯಲಾಗುತ್ತದೆ.

ವಾಸ್ತುಶಾಸ್ತ್ರದಲ್ಲಿ ಬರುವ ಶ್ಲೋಕವೊಂದರಲ್ಲಿ ದೇವಾಲಯದ ವಿವಿಧ ಭಾಗಗಳನ್ನು ಮನುಷ್ಯನ ಬೇರೆ ಬೇರೆ ಅಂಗಗಳಿಗೆ ಸಮೀಕರಿಸಲಾಗಿದ್ದು; 'ಅರ್ಧಮಂಟಪವು ಹೃದಯಸ್ಥಾನ' ಎಂದಿದೆ. ಅಂದರೆ ನವರಂಗವನ್ನು ಮನುಷ್ಯನ ವಕ್ಷಸ್ಥಳಕ್ಕೆ ಹೋಲಿಸಲಾಗಿದೆ.

ಕಲ್ಯಾಣ ಚಾಲುಕ್ಯ ಮತ್ತು ಹೊಯ್ಸಳ ಶೈಲಿಯ ಇತರ ಕೆಲವು ದೇವಾಲಯಗಳಲ್ಲಿ, ದೇವಾಲಯಕ್ಕೆ ಗೂಢಮಂಟಪವನ್ನು ಒದಗಿಸಲಾಗಿಲ್ಲ. ಬದಲಿಗೆ ಸುಕನಾಸಿಯ ಮುಂದೆ, ದೊಡ್ಡ ತೆರೆದ ಸಭಾಂಗಣವನ್ನು ನಿರ್ಮಿಸಲಾಯಿತು. ಈ ಸಭಾಂಗಣದ ಮಧ್ಯಭಾಗದಲ್ಲಿ ಸ್ವಲ್ಪ ಎತ್ತರದ ವೇದಿಕೆಯನ್ನು ನಿರ್ಮಿಸಿ, ಈ ವೇದಿಕೆಯನ್ನು ಎಲ್ಲಾ ರೀತಿಯ ಪ್ರದರ್ಶನ ಕಲೆಗಳಿಗೆ ಬಳಸಲಾಯಿತು. ಅಂತಹ ಕಂಬಗಳಿರುವ ಸಭಾಂಗಣಗಳನ್ನು ನವರಂಗ ಎಂದು ಕರೆಯವ ಬದಲು ಅವುಗಳನ್ನು ರಂಗಮಂಟಪ ಎಂದು ಕರೆಯಲಾಗುತ್ತದೆ. ವಿಜಯನಗರ ಶೈಲಿಯ ದೇವಸ್ಥಾನಗಳಲ್ಲೂ ಇಂತಹುದೇ ಆದ ರಂಗಮಂಟಪವನ್ನು ಹೆಚ್ಚಾಗಿ ಕಾಣಬಹುದು. ಈ ರಂಗಮಂಟಪವನ್ನು ನಾಟ್ಯ ಮಂಟಪ, ನಟನ ಶಾಲೈ, ಸದಿರ್ ಶಾಲೈ, ನಾನಾವಿಧ ನಟನ ಶಾಲೈ, ನಾಟ್ಯ ಮಂಟಪ, ನೃತ್ಯ ಮಂಟಪ ಮತ್ತು ಕೂತಂಬಲಂ ಎಂದಾಗಿ ವಿವಿಧ ಪ್ರದೇಶಗಳಲ್ಲಿ ವಿಭಿನ್ನ ಹೆಸರುಗಳಿಂದ ಕರೆಯಲಾಗುತ್ತಿತ್ತು.

ಆವಣಿ ದೇವಸ್ಥಾನಸಂಕೀರ್ಣದ ಗೂಢಮಂಡಪದ ಮಧ್ಯದಲ್ಲಿ, ನಾಲ್ಕು ಕಂಬಗಳ ನಡುವೆ ನೆಲದಿಂದ ಸ್ವಲ್ಪ ಎತ್ತರಕ್ಕೆ ವೇದಿಕೆ ಇದೆ. ಹಾಗು ಒಳಗೋಡೆಗಳು ಸರಳವಾಗಿದ್ದು ಯಾವುದೇ ಅಲಂಕಾರವನ್ನು ಹೊಂದಿಲ್ಲ. ನವರಂಗದ ಮೇಲ್ಛಾವಣಿಯಲ್ಲಿ ಈ ದೇವಾಲಯದ ಪ್ರಧಾನ ದೇವತೆಯಾದ ಅಂದರೆ ಶಿವ ಶಕ್ತಿಯರನ್ನು ಸುತ್ತುವರಿದ ಅಷ್ಟದಿಕ್ಪಾಲಕರ ಕೆತ್ತನೆ ಇದೆ. ನಾಲ್ಕು ಕಂಬಗಳಲ್ಲಿರುವ, ನೃತ್ಯ ಶಿಲ್ಪಗಳು ಹಾಗು ವಾದ್ಯ ಸಂಗೀತದವರ ಕೆತ್ತನೆಗಳಿವೆ. ಇದರಿಂದಾಗಿ ಈ ದೇವಸ್ಥಾನದಲ್ಲೂ ರಂಗಭೋಗದ ಸಂಪ್ರದಾಯವಿದ್ದಿರಬಹುದು ಎಂದು ಅನಿಸುತ್ತದೆ.







ಇಲ್ಲಿ ಸೇವೆ ಸಲ್ಲಿಸಿರಬಹುದಾದ ನರ್ತಕಿಯ ವಸ್ತ್ರಾಲಂಕಾರ, ಆಭರಣ, ಕೇಶವಿನ್ಯಾಸವನ್ನು ಶಿಲ್ಪಿಯು ಅತಿ ಸೂಕ್ಷ್ಮವಾಗಿ ಬಹಳ ವಿಭಿನ್ನವಾಗಿ ಕೆತ್ತಿದ್ದಾನೆ. ಈ ನರ್ತಕಿಯ ಮುಖದಲ್ಲಿ ಪ್ರಸನ್ನತೆಯ ಭಾವ ಕಾಣಬಹುದು. ಈ ಕೆತ್ತನೆಯಲ್ಲೆ ಈಕೆ ಸುರಸುಂದರಿಯಂತೆ ಕಂಡರೆ, ಇನ್ನು ವಾಸ್ತವಾಂಶದಲ್ಲಿ ಈಕೆಯದು ರಂಭೆ ಊರ್ವಶಿಯರನ್ನು ನಾಚಿಸುವ ಸೌಂದರ್ಯವಷ್ಟೇ ಸರಿ.






ಡಿ.ವಿ.ಜಿ. ಅವರ ಅಂತಃಪುರಗೀತೆ ಇಲ್ಲಿ ನೆನಪಾಗುತ್ತದೆ :

ನಟನವಾಡಿದಳ್ ತರುಣಿ ನಟನವಾಡಿದಳ್
ಕಟು ಮುಖಾಭಿನಯಗಳಿಂದ ನಟನವಾಡಿದಳ್ ||
ಕೊರವಿತಿವೊಲು ವೇಷ ತೊಟ್ಟು
ಸ್ಮರನ ಗುಟ್ಟ ಮನದೊಳಿಟ್ಟು ನಟನವಾಡಿದಳ್ ||
ಢಮರು ಢಣರು ಢಣ್ ಢಣರನೆ ಚಿಟಿಕೆ ತಾಳ ಚಟ ಚಟರೆನೆ ||
ಕುಲುಕಿ ಬಳುಕಿ ಬಳ್ಳಿಯೊಡನೆ ಒಲಿದು ನಲಿದು ಕುಣಿದು ಲಲನೆ
ನಟನವಾಡಿದಳ್ ||
ಈಶ ತಾಂಡವದಲೊಮ್ಮೆ ರಾಸ ರಭಸದಿಂದಲೊಮ್ಮೆ |
ಆಶೆನೋಟದಿಂದಲೊಮ್ಮೆ ಕೇಶ ವೇಷ ದಾಸಿ ಇವಳು
ನಟನವಾಡಿದಳ್ ||

ಈ ಕಂಬದಲ್ಲಿರುವ ಶಿಲ್ಪದಲ್ಲಿ ಸುಂದರ ನರ್ತಕಿಯರ ಜೊತೆ ವಿವಿಧ ವಾದ್ಯ ವೃಂದದಲ್ಲಿ ನಟ್ಟುವಕಾರ, ಮೃದಂಗದವರು, ಉಡುಕ್ಕ ವಾದ್ಯ ನುಡಿಸುವವರನ್ನು ಕಾಣಬಹುದು. ಇಲ್ಲಿ ಕೇವಲ ತಾಳಕ್ಕೆ ಬೇಕಾಗಿರುವ ಘನ ಹಾಗೂ ಅವನದ್ಧವಾದ್ಯಗಳನ್ನು ಮಾತ್ರ ಈ ರಂಗಭೋಗದ ಕಂಬಗಳ ಶಿಲ್ಪಗಳಿಗೆ ವಸ್ತುವಾಗಿ ಬಳಸಿದ್ದಾರೆ. ಅಲ್ಲದೆ ಕಲಾವಿದರು ನಿಂತು ವಾದ್ಯವನ್ನು ನುಡಿಸುತ್ತಿರುವುದನ್ನು ವಿಶ್ಲೇಷಿಸಿದರೆ ಆ ಕಾಲದಲ್ಲಿ ಇಂದಿನ ರೀತಿಯ ಪಕ್ಕವಾದ್ಯದವರಿಗೆ ಬಳಸುವ ವಿಶೇಷವಾದ ವೇದಿಕೆ ಇರಲಿಲ್ಲವೆಂದು ತೋರುತ್ತದೆ.



ಪ್ರಸಿದ್ಧ ಕಲಾವಿದೆಯಾದ ಶ್ರೀಮತಿ ಉಷಾ ದಾತಾರ್ ಅವರು ಈ ಶ್ರೀಮಂತ ಸಂಪ್ರದಾಯದ ಬಗ್ಗೆ ಹೀಗೆ ಹೇಳುತ್ತಾರೆ – "ನರ್ತಕಿಯು ವಿವಿಧ ಸಾಂಪ್ರದಾಯಿಕ ವಾದ್ಯಗಳ ಸಂಗೀತಕ್ಕೆ ಹೆಜ್ಜೆ ಹಾಕುವ ಮೂಲಕ ನೃತ್ಯದ ಆರಂಭವನ್ನು ಅಥವಾ ರಂಗ ಭೋಗವನ್ನು ಪ್ರಾರಂಭಿಸುತ್ತಾಳೆ. ರಂಗ ಮಂದಿರ ಅಥವಾ ವೇದಿಕೆಯನ್ನು ಪ್ರವೇಶಿಸುವಾಗ, ಒಂಬತ್ತು ದಿಕ್ಕುಗಳ ಅಧಿಪತಿಗಳ ಆಶೀರ್ವಾದವನ್ನು ಪಡೆಯಲು ಒಂಬತ್ತು ದಿಕ್ಕುಗಳಿಗೆ ನೃತ್ಯದ ಮೂಲಕ ನಮಸ್ಕಾರಗಳನ್ನು ಸಲ್ಲಿಸುತ್ತಾಳೆ. ಆಯಾ ನಿರ್ದಿಷ್ಟ ದಿಕ್ಕನ್ನು ಆಳುವ ಅಧಿಪತಿಯನ್ನು ಸಂತೋಷಗೊಳಿಸಲು ಪ್ರತಿಯೊಂದು ದಿಕ್ಕಿಗೂ ತನ್ನದೇ ಆದ ರಾಗ ಮತ್ತು ತಾಳದಲ್ಲಿ ನಮಸ್ಕಾರವನ್ನು ಮಾಡಲಾಗುತ್ತದೆ. ಹೀಗೆ ಇದೊಂದು ಸುಧೀರ್ಘವಾದ ಪೂಜಾ ಕೈಂಕರ್ಯವಾಗಿತ್ತು."



ಸಾಂಪ್ರದಾಯಿಕವಾಗಿ ಇಂದಿಗೂ ನಾವು ನವಸಂಧಿ ಕೌತುವಗಳೆಂಬ ನರ್ತನವನ್ನು ಕೆಲವು ದೇವಸ್ಥಾನದ ಪೂಜಾ ಹಾಗು ಉತ್ಸವದ ಸಂದರ್ಭದಲ್ಲಿ ಕಾಣಬಹುದು.

ಈ ದೇವಾಲಯದಲ್ಲಿ, ಗೋಪುರದಿಂದ ಪ್ರಾರಂಭವಾಗಿ, ಕಡೆಗೆ ಜಾಲವಾತಾಯನದಲ್ಲೂ ನರ್ತನವನ್ನು ಕಾಣಬಹುದು. ಯುಗಳ ನೃತ್ಯ



ಕೂಡ ಈ ಸಮಯದಲ್ಲಿ ಸಾಮಾನ್ಯವಾಗಿತ್ತೆನ್ನುವುದು ತಿಳಿಯುತ್ತದೆ. ಲಕ್ಷ್ಮಣಲಿಂಗೇಶ್ವರದ ನವರಂಗದ ಒಂದು ಕಂಬದಲ್ಲಿ ಸಾಕ್ಷಾತ್ ಆ ಮಹಾನಟನನ್ನೇ ಕಾಣಬಹುದು.



ಇನ್ನು ಈ ನವರಂಗದ ಧ್ವನಿ ಹಾಗು ಬೆಳಕಿನತ್ತ ಗಮನಹರಿಸೋಣ. ದಕ್ಷಿಣ ಭಾರತದ ದೇವಾಲಯಗಳಲ್ಲಿ ಧ್ವನಿಜ್ಞಾನದ (acoustics ) ಅರಿವನ್ನು ಇಟ್ಟುಕೊಂಡು ದೇವಾಲಯ ನಿರ್ಮಾಣ ಮಾಡಲಾಗಿತ್ತು. ಕಲ್ಲು ಹೆಚ್ಚು ಪ್ರತಿಧ್ವನಿಯನ್ನು ಮೂಡಿಸುತ್ತದೆ. ಅಂತಹ ಕಲ್ಲಿನ ಮೇಲೆ ಕೆತ್ತನೆಗಳನ್ನು ಮಾಡಿದಾಗ ಈ ಪ್ರತಿಧ್ವನಿಯು ಕಡಿಮೆಯಾಗುತ್ತದೆ. ನಂತರ ಕಂಬದಲ್ಲಿನ ಈ ಶಿಲೆಯನ್ನೇ ಧ್ವನಿವರ್ಧಕ ಸಾಧನವನ್ನಾಗಿ ನಮ್ಮ ಅನುಕೂಲಕ್ಕೆ ತಕ್ಕಂತೆ ಪರಿವರ್ತಿಸಿಕೊಳ್ಳಬಹುದಾಗಿದೆ. ಇಂತಹ ಒಂದು ವಿಜ್ಞಾನದ ಅರಿವು ನಮ್ಮ ಶಿಲ್ಪಿಗಳಿಗೂ ಇತ್ತು ಎಂಬ ಸಂಗತಿ ಆಶ್ಚರ್ಯವುಂಟುಮಾಡುತ್ತದೆ.

ದೇವಾಲಯಗಳಲ್ಲಿ ಪ್ರಕಾಶಕ್ಕೆ ಮೂಲವಾದ ಸೂರ್ಯನಿಗೆ ಪ್ರಾಮುಖ್ಯತೆಯನ್ನು ನೀಡಿದ್ದರೂ ಸಹ, ನೈಸರ್ಗಿಕ ಬೆಳಕನ್ನು ಬಹಳ ವಿರಳವಾಗಿ ಬಳಸಲಾಗುತ್ತಿತ್ತು. ಮಾನವನ ಕಣ್ಣುಗಳು ಬೆಳಕಿನಲ್ಲಿ ಭೌತಿಕ ಪ್ರಪಂಚದ ಕಡೆಗೆ ವಿಚಲಿತವಾಗದೆ, ಗುಡಿಯ ಕತ್ತಲೆಯಿಂದ ಆಧ್ಯಾತ್ಮಿಕ ಜಗತ್ತಿನಲ್ಲಿ ಕೆಲವು ಕ್ಷಣಗಳು ಆ ಪರಮಾತ್ಮನ ಧ್ಯಾನದಲ್ಲಿ ತಲ್ಲೀನಲಾಗಲಿ ಎಂಬ ಮಹತ್ವವಿತ್ತು. ಹಾಗಾಗಿ ಗರ್ಭಗುಡಿಯಲ್ಲಿ ಮಾತ್ರ ದೇವರ ದರ್ಶನಕ್ಕೆಂದು ದೀಪ ಹಚ್ಚುತ್ತಿದ್ದರು. ಆದರೆ ರಂಗಭೋಗದ ಕೈಂಕರ್ಯಕ್ಕೆ ನವರಂಗದಲ್ಲಿ ಬೆಳಕನ್ನು ಹೇಗೆ ಒದಗಿಸುತ್ತಿದ್ದರು?

ಶಿಲ್ಪಿಗಳು, ದಕ್ಷಿಣದಿಂದ ಬರುವ ಬೆಳಕು ಸಾಮಾನ್ಯವಾಗಿ ಉತ್ತಮವಾಗಿರುತ್ತದೆ ಏಕೆಂದರೆ ಸೂರ್ಯನ ಬೆಳಕು ದಿನ ಮತ್ತು ವರ್ಷವಿಡೀ ಸ್ಥಿರವಾಗಿರುತ್ತದೆ ಎಂದು ಆ ಭಾಗಕ್ಕೆ ಜಾಲವಾತಾಯನವನ್ನು ನಿರ್ಮಿಸುತ್ತಿದ್ದರು. ಕಣ್ಣಿನ ಮಟ್ಟಕ್ಕಿಂತ ಎತ್ತರದಲ್ಲಿರುವ ಕಿಟಕಿಗಳು ಇಡೀ ಕೋಣೆಯನ್ನು ಬೆಳಗಿಸಬಹುದು. ಬೆಳಕು ಜಾಲವಾತಾಯನದ ಮೂಲಕ ಪ್ರವೇಶಿಸುತ್ತದೆ ಮತ್ತು ಛಾವಣಿಯ ಮೇಲೆ ಪ್ರತಿಫಲಿಸಿದಾಗ ( reflect ), ಕೆಳಗಿನ ಕೋಣೆಯ ಸುತ್ತಲೂ ಬೆಳಕನ್ನು ಹರಡುತ್ತದೆ. ಈ ನವರಂಗವನ್ನು ಇದೆ ಪರಿಕಲ್ಪನೆಯ ಆಧಾರದಮೇಲೆ ನಿರ್ಮಿಸಲಾಗಿದೆ.

ಶಿಲ್ಪಿಗಳು, ದೇವಾಲಯವನ್ನು ಕಟ್ಟಲು ವಾಸ್ತುಶಿಲ್ಪ, ಶಿಲ್ಪವನ್ನು ಕೆತ್ತಲು ಶಿಲ್ಪಶಾಸ್ತ್ರ, ನೃತ್ಯ ಶಿಲ್ಪವನ್ನು ಕೆತ್ತಲು ನಾಟ್ಯಶಾಸ್ತ್ರ, ಭೌಗೋಳಿಕ ಶಾಸ್ತ್ರ, ವಿಜ್ಞಾನ, ಹೀಗೆ ಇನ್ನು ಎಷ್ಟೋ ಶಾಸ್ತ್ರಗಳಲ್ಲಿ ಪರಿಣಿತಿ ಹೊಂದಿದ್ದರೆಂದು ತಿಳಿದುಬರುತ್ತದೆ.

ದಕ್ಷಿಣ ಭಾರತದ ದೇವಾಲಯಗಳು ಧಾರ್ಮಿಕ, ಕಲೆ ಮತ್ತು ಸಾಂಸ್ಕೃತಿಕ ವೈಭವದ ನಿಜವಾದ ಭಂಡಾರವಾಗಿದೆ. ಇಂತಹ ಪುರಾತನ ದೇವಾಲಯಗಳನ್ನು ಸಂರಕ್ಷಿಸುವ ಪ್ರಾಮುಖ್ಯತೆಯನ್ನು ಶಿವಭಕ್ತಿಯ ಐದು ಉದಾತ್ತ ಕ್ರಿಯೆಗಳಲ್ಲಿ ಒಂದಾಗಿ ಸೇರಿಸುವ ಮೂಲಕ ಒತ್ತಿಹೇಳಲಾಗಿದೆ. ಪವಿತ್ರ ಕ್ಷೇತ್ರಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಶ್ರದ್ಧೆಯಿಂದ ಕೆಲಸ ಮಾಡುವ ಮೂಲಕ ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಳ್ಳಲು ನಾವೆಲ್ಲರೂ ಹೋರಾಡೋಣ.

ನೃತ್ಯಶಿಲ್ಪಯಾತ್ರೆಯ ಅಂಗವಾಗಿ ದೇವಾಲಯ ವೀಕ್ಷಣೆ ಹಾಗು ಈ ಲೇಖನವನ್ನು ಬರೆಯುವ ಸದಾವಕಾಶ ಕಲ್ಪಿಸಿಕೊಟ್ಟ ನೂಪುರ ಭ್ರಮರಿಯ ಡಾ. ಮನೋರಮಾ ಭಗಿನಿ ಅವರಿಗೆ ನನ್ನ ಹೃತ್ಪೂರ್ವಕ ನಮನಗಳು.

Reference :

1 <shodhganga.inflibnet.ac.in/bitstream/10603/91948/10/10_chapte>

2 <www.wisdomlib.org>

3 <https://www.sundayobserver.lk/2021/08/22/feature/architectural-excellence-ancient-indian-dance-halls>

4 Guru Usha Dattar – THARANG UTSAV

5 Jnanayagna series 4 – Dr Karuna Vijayendra

6 <www.rasikas.org/forums/viewtopic.php?t=34694>

7 Shodhganga@INFLIBNET: A Study of Acoustics in Performance Spaces

8 <core.ac.uk/download/pdf/6101658.pdf>

9 Lighting in ancient Temples | Dr. Uday Dokras - Academia.edu

10 ನಟನ ವಾಡಿದಳ್ ತರುಣಿ (Natanavaadidal Tharuni) | ಕನ್ನಡ ನುಡಿ(Kannada Nudi)

11 Picture courtesy : Smt. Divya Prasad